# ಸ್ಥಿರ /ಚರ ಮಾರಾಟ ಗಾಡಿ ಘಟಕ

## (Static/Mobile Vending Cart)

### ಮಾರ್ಗಸೂಚಿ

**1. ಕಾರ್ಯಕ್ರಮದ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು :**

ಗ್ರಾಹಕರು ಯಾವಾಗಲೂ ತಾಜಾ ಹಾಗೂ ಉತ್ತಮ ಗುಣಮಟ್ಟದ ಹಣ್ಣು ಮತ್ತು ತರಕಾರಿಗಳನ್ನು ಇಷ್ಟ ಪಡುತ್ತಾರೆ ಮತ್ತು ಒಳ್ಳೆಯ ಬೆಲೆ ನೀಡಿ ಖರೀದಿಸುತ್ತಾರೆ.

ಸಾಧಾರಣವಾಗಿ ತೋಟಗಾರಿಕೆ ಉತ್ಪನ್ನಗಳು ಕಟಾವಿನ ನಂತರ ಸಾಗಾಣಿಕೆ, ದಾಸ್ತಾನು, ಸಗಟು ಮತ್ತು ಚಿಲ್ಲರೆ ಮಾರಾಟ ಹಂತಗಳಲ್ಲಿ ಸೂಕ್ತ ರೀತಿಯ ನಿರ್ವಹಣೆ ಇಲ್ಲದ ಕಾರಣ ಶೇ. 20 ರಿಂದ 25 ರಷ್ಟು ಹಾಳಾಗಿ ಅಪಾರ ನಷ್ಟವಾಗುತ್ತಿದ್ದು ಇದರಿಂದ ಬೆಳೆಗಾರರು ಸಂಕಷ್ಟಕ್ಕೆ ಈಡಾಗುವುದರ ಜೊತೆಗೆ ಗ್ರಾಹಕರು ಸಹಾ ದುಬಾರಿ ಬೆಲೆ ತರಬೇಕಾಗುತ್ತದೆ. ಆದಕಾರಣ ಚಿಲ್ಲರೆ ಮಾರಾಟಗಾರರು ಮಾರಾಟ ಹಂತದಲ್ಲಿ ಬೀದಿ ಸುತ್ತಿ ಮಾರಾಟ ಮಾಡುವವರಿಗೆ ತೋಟಗಾರಿಕೆ ಉತ್ಪನ್ನಗಳ ತಾಜಾತನ ಹಾಗೂ ಗುಣಮಟ್ಟ ಹಾಳಾಗದಂತೆ ರಕ್ಷಣೆ ನೀಡಲು ಸೂಕ್ತವಾದ ನೂತನ ರೀತಿಯ ಸ್ಥಿರ /ಚರ ಮಾರಾಟ ಗಾಡಿಯ ಅವಶ್ಯಕತೆ ಇದೆ. ಇದರಿಂದ ಚಿಲ್ಲರೆ ಮಾರಾಟಗಾರರ ನಷ್ಟ ಕಡಿಮೆಯಾಗುವುದರ ಜೊತೆಗೆ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಉತ್ಪನ್ನಗಳು ಲಭ್ಯವಾಗುತ್ತವೆ.

**2. ಕಾರ್ಯಕ್ರಮದ ಉದ್ದೇಶಗಳು:**

ತೋಟಗಾರಿಕೆ ಉತ್ಪನ್ನಗಳ ಚಿಲ್ಲರೆ ಮಾರಾಟ ಹಂತದಲ್ಲಿ ಹಣ್ಣು ಮತ್ತು ತರಕಾರಿಗಳ ತಾಜಾತನ ಹಾಗೂ ಗುಣಮಟ್ಟ ಹಾಳಾಗದಂತೆ ಸಂರಕ್ಷಿಸಲು ಸೂಕ್ತವಾದ ನೂತನ ರೀತಿಯ ಸ್ಥಿರ /ಚರ ಮಾರಾಟ ಗಾಡಿಯ ಖರೀದಿಗೆ ಸಹಾಯ ಧನ ಸೌಲಭ್ಯ ಕಲ್ಪಿಸಿ, ಇದರಿಂದ ಚಿಲ್ಲರೆ ಮಾರಾಟಗಾರರಿಗೆ ಆಗುವ ನಷ್ಟವನ್ನು ತಪ್ಪಿಸಿ ಆದಾಯ ಹೆಚ್ಚಿಸುವುದರ ಜೊತೆಗೆ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಉತ್ಪನ್ನಗಳು ಲಭ್ಯವಾಗುವಂತೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶ.

**3. ವಾರ್ಷಿಕ ಕ್ರಿಯಾ ಯೋಜನೆ :**

2013-14 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸ್ಥಿರ /ಚರ ಮಾರಾಟ ಗಾಡಿ ಸಹಾಯಧನ ಕಾರ್ಯಕ್ರಮದಡಿ ಭೌತಿಕ 419 ಸಂಖ್ಯೆ ಹಾಗೂ ಆರ್ಥಿಕ ರೂ. 62.85 ಲಕ್ಷ ಅನುದಾನಗಳು ಅನುಮೋದನೆಯಾಗಿರುತ್ತದೆ.

ಸ್ಥಿರ /ಚರ ಮಾರಾಟ ಗಾಡಿ (Mobile Vending Cart) ಖರೀದಿಗೆ ಪ್ರತಿ ಘಟಕಕ್ಕೆ ಒಟ್ಟು ಖರೀದಿ ವೆಚ್ಚದ ಶೇಕಡಾ 50 ರಂತೆ ಗರಿಷ್ಟ ರೂ. 15,000-00 ಸಹಾಯ ಧನ ಸೌಲಭ್ಯ ನೀಡಲು ಅವಕಾಶವಿದೆ.

**4. ತಾಂತ್ರಿಕ ವಿಶಿಷ್ಟತೆ :**

1) ಸ್ಥಿರ /ಚರ ಮಾರಾಟ ಗಾಡಿಯು 8 ಅಡಿ ಉದ್ದ x 3 ಅಡಿ ಅಗಲ ಮತ್ತು 3 ಅಡಿ ಎತ್ತರ ಇರಬೇಕು.
2) ಮಾರಾಟ ಗಾಡಿಯು ಕನಿಷ್ಠ 150 Kg ಹಣ್ಣು/ತರಕಾರಿಗಳ ಸುರಕ್ಷಿತ ಶೇಖರಣಾ ಸಾಮರ್ಥ್ಯ ಹೊಂದಿರಬೇಕು.
3) ಘಟಕದ ಒಳಭಾಗವನ್ನು ಅಲ್ಯುಮಿನಿಯಂ frames/MS Hats ನಿಂದ ಮಾಡುವುದು ಕಡ್ಡಾಯವಾಗಿರುತ್ತದೆ.
4) ಸ್ಥಿರ /ಚರ ಮಾರಾಟ ಗಾಡಿಯ ಮಾದರಿ ರೇಖಾ ಚಿತ್ರಗಳನ್ನು ಲಗತ್ತಿಸಿದೆ.

**ಸ್ಥಿರ /ಚರ ಮಾರಾಟ ಗಾಡಿ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ**

| Sl. No. | Particulars | Qty | Rate | Amount |
|---|---|---|---|---|
| 1 | MS Flat for frame 5 mm thickness 1 ½” width | 8 | 200 | 1600.00 |
| 2 | Rims -10 guage thickness heavy duty | 4 | 425 | 1700.00 |
| 3 | 12 Ply Tyre with tubes (Heavy Duty) | 4 | 725 | 2900.00 |
| 4 | Wooden Flank –Sal Wood 6’x3 ½” x 1 ½” thickness | 1 | 5650.00 | 5650.00 |
| 5 | Wooden putty- 6” thickness for surrounding area of flank | 1 | 1350.00 | 1350.00 |
| 6 | MS Flats for supporting | -- | LS | 1600.00 |
| 7 | Power coated meta color sheet with arch shape roof structure for rain and sunlight proof | 1 | 6000.00 | 6000.00 |
| 8 | Carpentry charges, paining, welding, bolt and nut and labour charges | -- | LS | 5500.00 |
| 9 | Transportation charges | -- | LS | 2100.00 |
| 10 | Tax and other charges | -- | -- | 1600.00 |
| | | | **TOTAL** | **30,000.00** |

## 5. ಫಲಾನುಭವಿಗಳ ಅರ್ಹತೆ:

1. ಗ್ರಾಮ/ಪಟ್ಟಣ/ನಗರಗಳಲ್ಲಿನ ರೈತರು, ಭೂರಹಿತ ಕಾರ್ಮಿಕರು, ಕೃಷಿ ಕೂಲಿಗಾರರು ಹಾಗೂ ತೋಟಗಾರಿಕಾ ಉತ್ಪನ್ನಗಳ ಬೀದಿ ವ್ಯಾಪಾರ ಮಾಡುವ ಚಿಲ್ಲರೆ ಮಾರಾಟಗಾರರು ಈ ಕಾರ್ಯಕ್ರಮದ ಅಡಿಯಲ್ಲಿ ಸಹಾಯ ಧನ ಸೌಲಭ್ಯ ಪಡೆಯಬಹುದು.
2. ಫಲಾನುಭವಿಯು ಸ್ಥಳೀಯ ನಿವಾಸಿಯಾಗಿದ್ದು, ಅಧಿಕೃತ ಗುರುತಿನ ಚೀಟಿ ಹೊಂದಿರಬೇಕು. ಮತ್ತು ಖಾಯಂ ನಿವಾಸ ಸ್ಥಳದ ವಿಳಾಸ ನೀಡಬೇಕು.

## 6. ಅರ್ಜಿ ಸಲ್ಲಿಸುವ ವಿಧಾನ, ಅರ್ಜಿ ಪರಿಶೀಲನೆ ಮತ್ತು ಫಲಾನುಭವಿಗಳ ಆಯ್ಕೆ :

- ಈ ಕಾರ್ಯಕ್ರಮದಲ್ಲಿ ಫಲಾನುಭವಿಯನ್ನು ಆಯ್ಕೆ ಮಾಡುವ ಪೂರ್ವದಲ್ಲಿ ಜಿಲ್ಲೆಗೆ ನಿಗಧಿಯಾಗಿರುವ ವಾರ್ಷಿಕ ಗುರಿಗೆ ಅನುಸಾರವಾಗಿ ಸಂಬಂಧಿಸಿದ ತೋಟಗಾರಿಕೆ ಉಪನಿರ್ದೇಶಕರು ಕಾರ್ಯಕ್ರಮದ ಬಗ್ಗೆ ಜಿಲ್ಲೆಯಲ್ಲಿ ಹೆಚ್ಚಿನ ಪ್ರಚಾರ ಕೈಗೊಳ್ಳುವುದು.

- ಫಲಾನುಭವಿ ನಿಗಧಿತ ಅರ್ಜಿಯಲ್ಲಿ ಪಾಸ್‌ಪೋರ್ಟ್ ಅಳತೆಯ ತನ್ನ ಭಾವಚಿತ್ರ ಮತ್ತು ಗುರುತಿನ ಚೀಟಿಯೊಂದಿಗೆ ಅರ್ಜಿಯನ್ನು ಸಮೀಪದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ನೀಡಬೇಕು.

- ತಾಲ್ಲೂಕು ಮಟ್ಟದ ಅಧಿಕಾರಿಗಳು ಅರ್ಜಿಯನ್ನು ಪರಿಶೀಲಿಸಿದ ನಂತರ ಫಲಾನುಭವಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಹಿರಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳ ಶಿಫಾರಸ್ಸಿನೊಂದಿಗೆ ತೋಟಗಾರಿಕೆ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.
- ಜಿಲ್ಲೆಗೆ ನಿಗದಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಜಿಲ್ಲಾ ಸಮಿತಿಯ ಅನುಮತಿ/ ಗಮನಕ್ಕೆ ತಂದು, ಜಿಲ್ಲಾ ಸಮಿತಿ ಮುಖಾಂತರ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಫಲಾನುಭವಿಯ ಆಯ್ಕೆ ಮಾಡಿ , ಜಿಲ್ಲಾ ಸಮಿತಿಯಲ್ಲಿ ಅನುಮೋದನೆ ಪಡೆದುಕೊಂಡು ತೋಟಗಾರಿಕೆ ಉಪ ನಿರ್ದೇಶಕರವರು ಫಲಾನುಭವಿಗೆ ಅನುಮತಿ ನೀಡುವುದು.
- ಫಲಾನುಭವಿಗೆ ಅನುಮತಿ ನೀಡುವ ಪೂರ್ವದಲ್ಲಿ ಈ ಮಾರ್ಗಸೂಚಿಯೊಂದಿಗೆ ನೀಡಿರುವ ರೇಖಾ ಚಿತ್ರದಲ್ಲಿ ತಿಳಿಸಿರುವಂತೆ ತಳ್ಳು ಮಾರಾಟ ಗಾಡಿಯನ್ನು ನಿರ್ಮಿಸಲು ಇಚ್ಚಿಸಿದ್ದಲ್ಲಿ ಮಾತ್ರ ಅಂತಹ ಫಲಾನುಭವಿಗೆ ಮಾತ್ರ ಅನುಮತಿ ನೀಡುವುದು.
- ಯಾವುದೇ ಕಾರಣಕ್ಕೂ ವಿವಿಧ ಪಟ್ಟಣಗಳಲ್ಲಿ / ನಗರಗಳಲ್ಲಿ ಪ್ರಸ್ತುತ ಬಳಸುತ್ತಿರುವ 4 ಸೈಕಲ್ ಚಕ್ರಗಳ ಸ್ಥಿರ /ಚರ ಗಾಡಿಯನ್ನು ಸಹಾಯಧನಕ್ಕೆ ಪರಿಗಣಿಸುವಂತಿಲ್ಲ.

## 7. ನಿರ್ದೇಶನಾಲಯದ ಅನುಮೋದನೆ :

ನಿರ್ದೇಶನಾಲಯದ ಅನುಮೋದನೆಗೆ ನಿಗಧಿತ ದಾಖಲಾತಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿಯೊಂದು ದಾಖಲಾತಿಗಳನ್ನು ಪರಿಶೀಲಿಸಿ ಛಾಯಾಚಿತ್ರ ಲಗತ್ತಿಸಿ ಚೆಕ್‌ಲಿಸ್ಟ್‌ನೊಂದಿಗೆ ಮಂಜೂರಾತಿಗೆ ಮಂಡಿಸುವುದು.

## 8. ಸಹಾಯಧನ ವಿತರಣೆ ಹಾಗೂ ಅನುಸರಿಸಬೇಕಾದ ಕ್ರಮಗಳು :

- ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (LOGO) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಸ್ಥಿರ /ಚರ ಮಾರಾಟ ಗಾಡಿಯನ್ನು ಮುಂಭಾಗದಲ್ಲಿ ಪ್ರದರ್ಶಿಸಬೇಕು.
- ಫಲಾನುಭವಿಯು ಬ್ಯಾಂಕಿನಿಂದ ಸಾಲ ಪಡೆದಿದ್ದಲ್ಲಿ ಅವರ ಬ್ಯಾಂಕ್ ಸಾಲದ ಖಾತೆಗೆ ಜಮಾ ಅಗುವಂತೆ ಆಥವಾ ಪೂರ್ಣ ವೆಚ್ಚವನ್ನು ಫಲಾನುಭವಿಯು ಭರಿಸಿದ್ದಲ್ಲಿ ಅವರ ಉಳಿತಾಯ ಖಾತೆಗೆ ಮಾರ್ಗಸೂಚಿಗಳನ್ನು ಪಾಲಿಸಿ ECS/NEFT ಮುಖಾಂತರ ಸಹಾಯಧನವನ್ನು ಜಮಾ ಮಾಡುವುದು.

## 9. ಆರ್ಥಿಕ ಪ್ರತ್ಯಾಯೋಜನೆ

ಈ ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯಂತೆ ಸಹಾಯಧನ ಮಂಜೂರು ಮಾಡಲು ಮಿಷನ್ ನಿರ್ದೇಶಕರವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

## 10. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು.

1. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯೊಂದಿಗೆ KSHMA ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ ಸಲ್ಲಿಸುವುದು.
2. ಸ್ಥಿರ /ಚರ ಗಾಡಿ Static/Mobile Vending Cart) ಸಹಾಯಧನ ಮಂಜೂರಾತಿಗಾಗಿ ಜನವರಿ 2014 ರ ನಂತರ ಅರ್ಜಿಗಳು ನಿರ್ದೇಶನಾಲಯಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಪುರಸ್ಕರಿಸದೆ, ಸಂಬಂಧಿಸಿದ ಜಿಲ್ಲೆಗಳಿಗೆ ಹಿಂತಿರುಗಿಸಲಾಗುವುದು.

| Sl. No. | Particulars | Qty | Rate | Amount |
|---|---|---|---|---|
| 1 | Wheels with all accessories like Rim, Supports, Tyres, Tubes with bearings etc complete | 4 No | 2000 | 8000.00 |
| 2 | Axils of Suitable size | 2 No | 1800 | 3600.00 |
| 3 | Frame for supporting front & back Axil | 3 No | 1200 | 3600.00 |
| 4 | Wooden frame made of 100x 100 mm Jungle wood of size 8ft x 3 ft x 3 ft | 1 No | 96 sq ft | 3400.00 |
| 5 | Water proof plywood 12 mm thick fitted to wooden frame 8ft x 3 ft x 3 ft with necessary fittings like hinges, fasterners, 132 sq ft ply wood, labour charges. | 96 sq ft | 100.00 | 9600.00 |
| 6 | Painting charges including oil paints & labour charges | | | 1800.00 |
| | | | **TOTAL** | **30.000.00** |

## 8. ತಾಂತ್ರಿಕ ಪರಿಶೀಲನಾ ಕ್ರಮಗಳು :

- ತೋಟಗಾರಿಕೆ ಉಪ ನಿರ್ದೇಶಕರವರಿಂದ ಮಂಜೂರಾತಿ ಪತ್ರ ಬಂದ ನಂತರ ಫಲಾನುಭವಿಯು ನಿಗದಿತ ವಿನ್ಯಾಸದ ತಳ್ಳು ಮಾರಾಟ ಗಾಡಿಯನ್ನು Fabricate ಮಾಡಿಸಿ/ಖರೀದಿಸಿ ಸಂಬಂಧಿಸಿದ ಸ.ತೋ.ಅ. ರವರಿಗೆ ವರದಿ ನೀಡಬೇಕು.
- ಸಂಬಂಧಿಸಿದ ಸ.ತೋ.ಅ. (RSK) ರವರು ಫಲಾನುಭವಿಯೊಂದಿಗೆ ತಳ್ಳು ಮಾರಾಟ ಗಾಡಿಯನ್ನು ಪರಿಶೀಲಿಸಿ, ಗಾಡಿಯ ಗುಣಮಟ್ಟ ನಿಗದಿತ ರೀತಿಯಲ್ಲಿ ಇದೆ ಎಂಬುದನ್ನು ದೃಢಪಡಿಸಿಕೊಳ್ಳಬೇಕು.
- ತಳ್ಳುವ ಗಾಡಿಯ 4 ದಿಕ್ಕುಗಳಿಂದ ಸಂಪೂರ್ಣವಾಗಿ ಕಾಣುವಂತೆ ಫಲಾನುಭವಿಯೊಂದಿಗೆ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿ/ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ತೆಗೆದಿರುವ ಛಾಯಾಚಿತ್ರಗಳನ್ನು (GPS Enabled) ಮತ್ತು Vat ಸಂಖ್ಯೆ ನಮೂದಿಸಿರುವ ಖರೀದಿ ಬಿಲ್ ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಿ ಅನುಮೋದನೆಗಾಗಿ ಸಲ್ಲಿಸಬೇಕು.
- ಫಲಾನುಭವಿ ತಳ್ಳು ಮಾರಾಟ ಗಾಡಿಯನ್ನು ( Mobile Vending Cart ) ಖರೀದಿಸಿರುವ ಬಗ್ಗೆ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು ಶೇ.5 ರಷ್ಟು , ತಾಲ್ಲೂಕಿನ ಹಿರಿಯ/ಸಹಾಯಕ ತೋಟಗಾರಿಕೆ ನಿರ್ದೇಶಕರು ಶೇ. 50 ರಷ್ಟು / ಹೋಬಳಿ ಮಟ್ಟದ ಅಧಿಕಾರಿಗಳು ಶೇ.100ರಷ್ಟು ಪರಿಶೀಲನೆ ಮಾಡಿ ದೃಢೀಕರಿಸಬೇಕು.
- ತೋಉನಿಯವರು ತಳ್ಳುವ ಗಾಡಿಯ (Mobile Vending Cart) ಪ್ರಸ್ತಾವನೆಯನ್ನು KSHMA ಕಛೇರಿಗೆ ಮಂಜೂರಾತಿಗಾಗಿ ಸಲ್ಲಿಸುವ ವೇಳೆ ಜಿಲ್ಲಾ ಸಮಿತಿಯ ಗಮನಕ್ಕೆ ತರುವುದು ಅಥವಾ ಜಿಲ್ಲಾ ಸಮಿತಿಯ ಒಪ್ಪಿಗೆ ಪಡೆಯುವುದು/ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಅನುಮತಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. (ಈ ಕಾರ್ಯಕ್ರಮಕ್ಕೆ ನೀಡಲಾದ ಪ್ರಚಾರ, ಕಛೇರಿಗೆ ಬಂದ ಒಟ್ಟು ಅರ್ಜಿಗಳು ಸಂಖ್ಯೆ , ಫಲಾನುಭವಿಯನ್ನು ಆಯ್ಕೆ ಮಾಡಲು ಅನುಸರಿಸಿದ ಮಾನದಂಡಗಳ ವಿವರಗಳನ್ನು ನೀಡುವುದು).
- ತಳ್ಳುವ ಗಾಡಿಯನ್ನು (Mobile Vending Cart) ಖರೀದಿಸಲು ಫಲಾನುಭವಿಗೆ ನೀಡಿರುವ ಅನುಮತಿ ಪತ್ರವನ್ನು ಲಗತ್ತಿಸುವುದು.

- ಫಲಾನುಭವಿಗಳು ಇಲಾಖೆಯ ಅನುಮತಿಯಿಲ್ಲದೆ ತಾವಾಗಿಯೇ ಖರೀದಿಸಿರುವ ಗಾಡಿಗಳನ್ನು ಸಹಾಯಧನಕ್ಕೆ ಪರಿಗಣಿಸುವುದಿಲ್ಲ.
- ತಳ್ಳುವ ಗಾಡಿಯನ್ನು ಖರೀದಿಸಿದ ನಂತರ ಮಂಜೂರಾತಿಗಾಗಿ ಪೂರ್ಣ ದಾಖಲಾತಿಗಳೊಂದಿಗೆ ಅರ್ಜಿಯನ್ನು KSHMA ಕಛೇರಿಗೆ ಸಲ್ಲಿಸುವುದು.
- ತಳ್ಳುವ ಗಾಡಿಯನ್ನು ಹಣ್ಣು/ತರಕಾರಿ/ತೋಟಗಾರಿಕೆ ಉತ್ಪನ್ನಗಳನ್ನು ಸ್ಥಳೀಯವಾಗಿ ಮಾರಾಟ ಮಾಡುವ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳುತ್ತೇನೆಂದು ಹಾಗೂ ಸದರಿ ತಳ್ಳುವ ಗಾಡಿಗೆ ಕೇಂದ್ರ / ರಾಜ್ಯ ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದನ್ನು ರೂ.100/- ಛಾಪಾ ಕಾಗದದಲ್ಲಿ ಬರೆದುಕೊಟ್ಟು ಮುಚ್ಚಳಿಕೆ ಪ್ರತಿಯನ್ನು ಪಡೆದುಕೊಳ್ಳುವುದು
- ಪ್ರಸ್ತಾವನೆಯೊಂದಿಗೆ ಸಲ್ಲಿಸುವ ಎಲ್ಲಾ ದಾಖಲಾತಿ ಪತ್ರಗಳಿಗೆ ಆಯಾ ರೈತ ಸಂಪರ್ಕ ಕೇಂದ್ರದ ಸ.ತೋ.ಅ ಮತ್ತು ತಾಲ್ಲೂಕಿನ ಹಿ.ಸ.ತೋ.ನಿ./ಸ.ತೋ.ನಿ.ರವರು ಕಡ್ಡಾಯವಾಗಿ ದಿನಾಂಕದೊಂದಿಗೆ ದೃಢೀಕರಣ ಮಾಡಬೇಕು.
- ಯಾವುದಾದರೂ ಜಿಲ್ಲೆಗಳಿಂದ ಅರ್ಹತೆ ಹೊಂದಿಲ್ಲದ, ನಿಗದಿ ಪಡಿಸಿದ ಸಮಯದ ನಂತರ ವಿಳಂಬವಾಗಿ ಅಥವಾ ಅಪೂರ್ಣವಾದ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ತೋಉನಿ ಮತ್ತು ಕೇಂದ್ರ ಕಛೇರಿ ಸಹಾಯಕರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.